www.needsofpublic.in

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ, ಆರೋಗ್ಯ ಸೌಧ,
ಮಾಗಡಿ ರಸ್ತೆ, ಬೆಂಗಳೂರು-23

ಇ-ಮೇಲ್:com-hfws@karnataka.gov.in ಕಛೇರಿ:+91 80 2335 4039
+91 80 2335 4085

ಸಂಖ್ಯೆ:ಇ-ಆಫೀಸ್-1840947 ದಿನಾಂಕ:-1706.2026.

## ಅಧಿಕೃತ ಜ್ಞಾಪನ ಪತ್ರ

ವಿಷಯ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮಂಜೂರಾಗಿ ಖಾಲಿ ಇರುವ ಹುದ್ದೆಗಳಲ್ಲಿ 400 ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹಾಗೂ 400 ಫಾರ್ಮಸಿ ಅಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ (Contract)ಆಧಾರದ ಮೇಲೆ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ:
1. ಈ ಕಛೇರಿ ಪತ್ರ ಸಂಖ್ಯೆ: ಎಸ್ ಆರ್ ಸಿ /98/2021-22, ದಿ:01.09.2023
2. ಸರ್ಕಾರದ ಆದೇಶ ಸಂಖ್ಯೆ: ಆಕುಕ 333 ಹೆಚ್ ಎಸ್ ಎಂ 2023, ದಿ:21.12.2024
3. ಸರ್ಕಾರದ ಆದೇಶ ಸಂಖ್ಯೆ:ಆಕುಕ 14 ಹೆಚ್ ಎಸ್ ಎಂppp 2025 ದಿ:21.05.2025.
4. ಈ ಕಛೇರಿ ಪತ್ರ ಸಂಖ್ಯೆ: ಪಿ.ಆರ್.ಎಂ/ಇ-1840947,
5. ಸರ್ಕಾರದ ಆದೇಶ ಸಂಖ್ಯೆ: ಆಕುಕ 14 ಹೆಚ್ಎಸ್ಎಂ 2025, ಬೆಂಗಳೂರು ದಿ:21-05-2025.
6. ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸುತ್ತೋಲೆ ಸಂಖ್ಯೆ:ಸಿಆಸುಇ 06 ಸೆನೆನಿ 2024, ದಿನಾಂಕ:20.05.2024
7. ಸರ್ಕಾರದ ಕಾರ್ಮಿಕ ಇಲಾಖೆ, (ಸ್ವೀಕೃತ ಸಮನ್ವಯ) ಅಧಿಸೂಚನೆ ಸಂಖ್ಯೆ:ಕಾಇ 411 ಎಲ್ ಡಬ್ಲ್ಯೂಎ 2023, ದಿನಾಂಕ:22-05-2026

*****

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮಾಂಕ (5)ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಎದುರಾಗಿ 400 ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹಾಗೂ 400 ಫಾರ್ಮಸಿಸ್ಟ್ ಹುದ್ದೆಗಳನ್ನು ಕೆಲವೊಂದು ಷರತ್ತಿಗೊಳಪಟ್ಟು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಮಾತ್ರ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಿ ಆದೇಶಿಸಲಾಗಿರುತ್ತದೆ.
ಮುಂದುವರೆದು, ಸಾರ್ವಜನಿಕರಿಗೆ/ ಜನ ಸಮುದಾಯಕ್ಕೆ ಉತ್ತಮ ಆರೋಗ್ಯ ಸೇವೆಯನ್ನು ಸಕಾಲದಲ್ಲಿ ನೀಡಲು ಅನುಕೂಲವಾಗುವಂತೆ ಇಲಾಖೆಯಲ್ಲಿ ಮಂಜೂರಾಗಿ ಪ್ರಸ್ತುತ ಖಾಲಿ ಇರುವ ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹಾಗೂ ಫಾರ್ಮಸಿ ಅಧಿಕಾರಿಗಳ ಹುದ್ದೆಗಳನ್ನು ವೃಂದದಲ್ಲಿನ ತೀವ್ರ ಅಗತ್ಯವಿರುವ ಖಾಲಿ ಸ್ಥಾನ/ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ: ಆಕುಕ 14 ಹೆಚ್ಎಸ್ಎಂ 2025, ಬೆಂಗಳೂರು ದಿ:21-05-2025 ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಗುತ್ತಿಗೆ ಆಧಾರದ ಮೇಲೆ ಪಡೆಯಲು ಸರ್ಕಾರವು ಅನುಮತಿ ನೀಡಿ ಆದೇಶಿಸಲಾಗಿರುತ್ತದೆ. ಅಂತಯೇ ಗುತ್ತಿಗೆ ಅಡಿಯಲ್ಲಿ ನೇಮಕಾತಿ ಮಾಡಿಕೊಳ್ಳಲು ಅಗತ್ಯ ಕ್ರಮವಹಿಸಲು **ಈ ಕೆಳಕಂಡ ಷರತ್ತುಗಳನ್ನು ವಿಧಿಸಲಾಗಿರುತ್ತದೆ.**

1. ಇಲಾಖೆಯಲ್ಲಿ ನೇರ ನೇಮಕಾತಿ ಮುಖಾಂತರ ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹಾಗೂ ಫಾರ್ಮಸಿ ಅಧಿಕಾರಿಗಳ ಹುದ್ದೆಗಳು ಭರ್ತಿಯಾದ ನಂತರ 400 ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹಾಗೂ 400 ಫಾರ್ಮಸಿ ಅಧಿಕಾರಿಗಳ ಹುದ್ದೆಗಳ ಗುತ್ತಿಗೆ ಸೇವೆಯನ್ನು ರದ್ದುಗೊಳಿಸತಕ್ಕದ್ದು.
2. ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳುವಾಗ ಭವಿಷ್ಯದ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಯಾವುದೇ ಕಾನೂನಿನ ತೊಡಕುಗಳು ಉದ್ಭವಿಸದಂತೆ ಕ್ರಮವಹಿಸತಕ್ಕದ್ದು.
3. ಗುತ್ತಿಗೆ ಆಧಾರದ ಮೇಲಿನ ಸಿಬ್ಬಂದಿಗಳ ಆಯ್ಕೆಯನ್ನು ಈ ಹಿಂದಿನ ಗುತ್ತಿಗೆ ಅವಧಿಯ ಸೇವೆಯನ್ನು ಪರಿಗಣಿಸದೆ, ಮತ್ತೆ ಹೊಸದಾಗಿ ಸೇವೆಗೆ ಸೇರಿಸಿಕೊಂಡಂತೆ ಪರಿಗಣಿಸಿ ಆಯ್ಕೆ (The Recruitment Should be done De-novo, without considering the pre-service of contract employees, as per extant C/R rules.)
4. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರು ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹಾಗೂ ಫಾರ್ಮಸಿ ಅಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಪೂರ್ವದಲ್ಲಿ ಜಿಲ್ಲಾವಾರು ಮತ್ತು ಸಿಬ್ಬಂದಿಗಳ ಕೊರತೆ ಇರುವ ಕೇಂದ್ರಗಳ ಮತ್ತು

www.needsofpublic.in

ಜಿಲ್ಲಾವಾರು ಮಾಹಿತಿಯನ್ನು ಮತ್ತು ಯಾವ ಜಿಲ್ಲೆ ಮತ್ತು ಕೇಂದ್ರಗಳಿಗೆ ಪ್ರಸ್ತಾಪಿತ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ತುಂಬುವ ಅವಶ್ಯಕತೆ ಇದೆ ಎಂಬುದರ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 493 ವೆಚ್ಚ-5/2022, ದಿ:17-05-2025ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಿದೆ.

**ವಿದ್ಯಾರ್ಹತೆ:**

**ಫಾರ್ಮಾಸಿಸ್ಟ್ ಅಭ್ಯರ್ಥಿಗಳು:** ಡಿ.ಫಾರ್ಮಾ ವಿದ್ಯಾರ್ಹತೆಯನ್ನು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು ಹಾಗೂ ಡಿ.ಫಾರ್ಮಾ ಅಭ್ಯರ್ಥಿಗಳು ಕರ್ನಾಟಕ ಫಾರ್ಮಸಿ ಕೌನ್ಸಿಲಿಂಗ್ ನಲ್ಲಿ ಕಡ್ಡಾಯವಾಗಿ ನೋಂದಣಿಯಾಗಿರಬೇಕು.

**ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಭ್ಯರ್ಥಿಗಳು**: ಡಿಪ್ಲೋಮಾ ಇನ್ ಲ್ಯಾಬೋರೇಟರಿ ತಾಂತ್ರಿಕ ವಿದ್ಯಾರ್ಹತೆಯನ್ನು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು

**ಆಯ್ಕೆಯ ವಿಧಾನ**: ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹಾಗೂ ಫಾರ್ಮಸಿ ಅಧಿಕಾರಿಗಳ ಹುದ್ದೆಗಳನ್ನು ನೇರ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವುದು.

**ಅರ್ಜಿ ಕರೆಯುವ ವಿಧಾನ:**

- ಸಾರ್ವಜನಿಕರ ತಿಳುವಳಿಕೆಗಾಗಿ ಸ್ಥಳೀಯ ಹಾಗೂ ರಾಜ್ಯ ಮಟ್ಟದ ಒಂದೊಂದು ದಿನ ಪತ್ರಿಕೆಗಳಲ್ಲಿ ಪ್ರಕಟಿಸಿ ನೇರ ಸಂದರ್ಶನಕ್ಕೆ ಆಹ್ವಾನಿಸುವುದು.
- ಜಿಲ್ಲೆಯ ವಾರ್ತಾ ಮತ್ತು ಪ್ರಚಾರ ಇಲಾಖೆಗೆ ಮಾಹಿತಿ ನೀಡಿ ಸಾರ್ವಜನಿಕವಾಗಿ ಪ್ರಚಾರ ಮಾಡಲು ಕ್ರಮ ಕೈಗೊಳ್ಳುವುದು.
- ಆರೋಗ್ಯ ಇಲಾಖೆಯ ರಾಜ್ಯ ಮಟ್ಟ ಮತ್ತು ಜಿಲ್ಲಾ ಮಟ್ಟದ ಎಲ್ಲಾ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಣೆಯನ್ನು ಪ್ರಕಟಿಸುವುದು.
- ಅರ್ಜಿಯನ್ನು (Application) ಯಾವುದೇ ಶುಲ್ಕವಿಲ್ಲದೆ ವಿತರಿಸತಕ್ಕದ್ದು.
- ಇಲಾಖೆಯ ಅಂತರ್ಜಾಲ ಹಾಗೂ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯ ಸೂಚನಾಫಲಕ/ ವೆಬ್ ಬುಲೆಟಿನ್ ನಲ್ಲಿಯೂ ಸಹ ಶುಲ್ಕರಹಿತವಾಗಿ ಪ್ರಕಟಿಸುವುದು.
- ಅಭ್ಯರ್ಥಿಯ ವಯಸ್ಸು 45 ವರ್ಷ ಒಳಗಿರತಕ್ಕದ್ದು.

**ಷರತ್ತು ಮತ್ತು ನಿಬಂಧನೆಗಳು**:

1. ಉಲ್ಲೇಖ(6)ರ ಸರ್ಕಾರದ ಸುತ್ತೋಲೆಯನ್ವಯ ಹೊರ ಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿಯನ್ನು ಕಡ್ಡಾಯವಾಗಿ ಅಳವಡಿಸಲು ಸೂಚಿಸಿದೆ.
2. ಉಲ್ಲೇಖ(7)ರ ಸರ್ಕಾರದ ಕಾರ್ಮಿಕ ಇಲಾಖೆಯ ಅಧಿಸೂಚನೆಯನ್ವಯ ಕಡ್ಡಾಯವಾಗಿ ಕನಿಷ್ಠ ವೇತನ ನಿಗಧಿಪಡಿಸಲು ಸೂಚಿಸಿದೆ.
3. ಗುತ್ತಿಗೆ ಅಡಿಯಲ್ಲಿ ನೇಮಕಾತಿ ಮಾಡಿಕೊಳ್ಳಲು ಆಯಾ ಜಿಲ್ಲಾ ಹಂತದಲ್ಲಿಯೆ ಅಗತ್ಯ ಕ್ರಮವಹಿಸುವುದು. ಗುತ್ತಿಗೆ ಆಧಾರದ ನೌಕರರ ಯಾವುದೇ ಆಯ್ಕೆಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ಅನುಮೋದನೆ ಇಲ್ಲದೆ ಮಾಡುವಂತಿಲ್ಲ.
4. ಅಭ್ಯರ್ಥಿಗಳಿಗೆ ಈ ಗುತ್ತಿಗೆಯು ಒಂದು ವರ್ಷದ ಅವಧಿಗೆ ನೇಮಕವಾಗಿರುತ್ತದೆ.
5. ಗುತ್ತಿಗೆ ಆಧಾರದ ಮೇಲೆ ಆಯ್ಕೆಗೊಂಡ ಸಿಬ್ಬಂದಿಯವರು ಖಾಯಂ ನೇಮಕಾತಿಗಾಗಲೀ, ವಿಶ್ರಾಂತಿ ವೇತನಕ್ಕಾಗಲೀ, ನಿವೃತ್ತಿ ಉಪದಾನ, ವೇತನ ಶ್ರೇಣಿ ಅಥವಾ ಇನ್ನಿತರ ಯಾವುದೇ ಭತ್ಯೆಗಳನ್ನು ಪಡೆಯಲು ಹಕ್ಕನ್ನು ಹೊಂದಿರುವುದಿಲ್ಲ ಮತ್ತು ಅರ್ಹರಿರುವುದಿಲ್ಲ ಹಾಗೂ ಈ ಕುರಿತು ಮಾನ್ಯ ನ್ಯಾಯಾಲಯಗಳಲ್ಲಿ ಪ್ರಶ್ನಿಸುವಂತಿಲ್ಲ.
6. ಆಯ್ಕೆಯನ್ನು ನಿರ್ದಿಷ್ಟ ಸ್ಥಳಗಳಿಗೆ ಮಾಡಿಕೊಳ್ಳುವುದರಿಂದ, ಅಭ್ಯರ್ಥಿಯ ಬೇಡಿಕೆಯ ಮೇಲೆ ಬೇರೆ ಯಾವುದೇ ಸ್ಥಳಕ್ಕೆ ವರ್ಗಾವಣೆಗಾಗಲೀ/ಪರಸ್ಪರ ವರ್ಗಾವಣೆಗಾಗಲೀ ಅಥವಾ ನಿಯೋಜನೆಗಾಗಲೀ ಅವಕಾಶವಿರುವುದಿಲ್ಲ.

**ಆಯ್ಕೆ ಸಮಿತಿ:**

ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು.

- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ - ಅಧ್ಯಕ್ಷರು
- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು - ಸದಸ್ಯ ಕಾರ್ಯದರ್ಶಿ
- ಪ್ರಾಂಶುಪಾಲರು, ಜಿಲ್ಲಾ ತರಬೇತಿ ಕೇಂದ್ರ - ಸದಸ್ಯರು
- ಜಿಲ್ಲಾ ಶಸ್ತ್ರ ಚಿಕಿತ್ಸಕರು/ವೈದ್ಯಕೀಯ ಅಧಿಕ್ಷಕರು - ಸದಸ್ಯರು
- ಆರ್.ಸಿ.ಹೆಚ್. ಅಧಿಕಾರಿಗಳು -ಸದಸ್ಯರು

7. ಅಭ್ಯರ್ಥಿಯು ಕೆಲಸಕ್ಕೆ ಹಾಜರಾಗುವಾಗ ಮೂಲ ದಾಖಲೆಗಳನ್ನು ಅಂದರೆ ವಿದ್ಯಾರ್ಹತೆಯ ಅಂಕಪಟ್ಟಿ, ಜನ್ಮ ದಿನಾಂಕದ ದಾಖಲೆ ಇತ್ಯಾದಿಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿಗೆ ಹಾಜರು ಪಡಿಸತಕ್ಕದ್ದು.

www.needsofpublic.in

8. ಗುತ್ತಿಗೆ ಆಧಾರದ ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹಾಗೂ ಫಾರ್ಮಸಿ ಅಧಿಕಾರಿಗಳ ಹುದ್ದೆಗಳನ್ನು ಯಾವುದೇ ಸಮಯದಲ್ಲಿ ಯಾವುದೇ ಕಾರಣವಿಲ್ಲದೆ ಒಂದು ತಿಂಗಳ ನೋಟಿಸ್ ನೀಡಿ ಕರ್ತವ್ಯದಿಂದ ಬಿಡುಗಡೆಗೊಳಿಸುವುದು.
9. ಕಾರ್ಯಕ್ಷಮತೆಯ ಬಗ್ಗೆ ದೂರು ಬಂದಲ್ಲಿ ಒಂದು ವಾರದ ನೋಟೀಸ್ ಕೊಟ್ಟು ಅಭ್ಯರ್ಥಿಗೆ ಸ್ಪಷ್ಟನೆ ನೀಡಲು ಅವಕಾಶ ನೀಡಿ ಕರ್ತವ್ಯದಿಂದ ಬಿಡುಗಡೆ ಮಾಡುವುದು.
10. ದುರ್ನಡತೆಯಿಂದಾಗಿ ನಷ್ಟ ಉಂಟಾದಲ್ಲಿ ಅದನ್ನು ಸರ್ಕಾರಕ್ಕೆ ತುಂಬಿಕೊಡುವ ಷರತ್ತಿಗೆ ಬದ್ಧರಾಗಿರಬೇಕು.
11. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯವು ಕಾಲಕಾಲಕ್ಕೆ ವಹಿಸಿದ ಕರ್ತವ್ಯ ಜವಾಬ್ದಾರಿಗಳನ್ನು ಅವರುಗಳು ತಪ್ಪದೇ ನಿರ್ವಹಿಸತಕ್ಕದ್ದು.
12. ಗುತ್ತಿಗೆ ಆಧಾರದ ಮೇಲೆ ಆಯ್ಕೆಗೊಂಡ ಗುತ್ತಿಗೆ ಆಧಾರದ ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹಾಗೂ ಫಾರ್ಮಸಿ ಅಧಿಕಾರಿಗಳ ಹುದ್ದೆಗಳನ್ನು ಖಾಯಂ ನೇಮಕಾತಿಗಾಗಲೀ, ವಿಶ್ರಾಂತಿ ವೇತನಕ್ಕಾಗಲೀ, ನಿವೃತ್ತ ಉಪದಾನ, ವೇತನ ಶ್ರೇಣಿ ಅಥವಾ ಇನ್ನಿತರ ಯಾವುದೇ ಭತ್ಯೆಗಳನ್ನು ಪಡೆಯಲು ಹಕ್ಕನ್ನು ಹೊಂದಿರುವುದಿಲ್ಲ ಮತ್ತು ಅರ್ಹರಿರುವುದಿಲ್ಲ ಹಾಗೂ ಈ ಕುರಿತು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. ಆಯ್ಕೆಯನ್ನು ನಿರ್ದಿಷ್ಟ ಸ್ಥಳಗಳಿಗೆ ಮಾಡಿಕೊಳ್ಳುವುದರಿಂದ, ಅಭ್ಯರ್ಥಿಯ ಬೇಡಿಕೆಯ ಮೇಲೆ ಬೇರೆ ಯಾವುದೇ ಸ್ಥಳಕ್ಕೆ ವರ್ಗಾವಣೆಗಾಗಲೀ/ ಪರಸ್ಪರ ವರ್ಗಾವಣೆಗಾಗಲೀ ಅಥವಾ ನಿಯೋಜನೆಗಾಗಲೀ ಅವಕಾಶವಿರುವುದಿಲ್ಲ.
13. ಉಲ್ಲೇಖ(7)ರ ರಾಷ್ಟ್ರೀಯ ಆರೋಗ್ಯ ಅಭಿಯಾನರವರ ಸುತ್ತೋಲೆ ದಿನಾಂಕ:10-02-2023ರಲ್ಲಿ ಉಲ್ಲೇಖಿಸಿರುವ ಸಿಬ್ಬಂದಿಗಳ ರಜಾ ಸೌಲಭ್ಯವನ್ನು ಸದರಿ ಗುತ್ತಿಗೆ ಆಧಾರದ ನೇಮಕಾತಿಗೆ ವಿಸ್ತರಿಸಲಾಗಿದೆ. ಆಯ್ಕೆ ಹೊಂದಿದ ಸಿಬ್ಬಂದಿಗಳು ತಾತ್ಕಾಲಿಕ ಸರ್ಕಾರಿ ನೌಕರರಿಗೆ ಸಿಗುವ ರಜೆಗಳನ್ನು ಪಡೆಯಲು ಮಾತ್ರ ಅರ್ಹರಿರುತ್ತಾರೆ. ಅಂದರೆ, ಪ್ರತಿಯೊಂದು ತಿಂಗಳ ಪೂರ್ಣ ಪ್ರಮಾಣದ ಸೇವೆ ಪೂರೈಸಿದರೆ ಒಂದು ದಿನ ಸಾಂದರ್ಭಿಕ ರಜೆ ಗಳಿಕೆಯಾಗುತ್ತದೆ. ಅಂತಹ ರಜೆಯನ್ನು ಬಿಡಿಯಾಗಿ ಅಥವಾ ಒಟ್ಟಾಗಿ ಮೇಲಾಧಿಕಾರಿಗಳ ಅಪ್ಪಣೆಯಂತೆ ಪಡೆಯಬಹುದು. ರಜೆಯನ್ನು ತಮ್ಮ ಹಕ್ಕನ್ನಾಗಿ ಕೇಳಿಪಡೆಯುವಂತಿಲ್ಲ. ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿರುವ ಸಿಬ್ಬಂದಿಗಳು ಈ ಕೆಳಕಂಡ ರಜಾ ಸೌಲಭ್ಯಗಳನ್ನು ಪಡೆಯಬಹುದಾಗಿದೆ.
14. ಮಾತೃತ್ವ ರಜೆಯನ್ನು ರಜೆಯ ಪ್ರಾರಂಭದ ದಿನಾಂಕದಿಂದ ಗರಿಷ್ಠ 180 ದಿನಗಳವರೆಗೆ (ಒಂದುನೂರ ಎಂಬತ್ತು ದಿನಗಳು) ಮಂಜೂರು ಮಾಡಬಹುದಾಗಿದೆ.
15. ಪುರುಷ ನೌಕರರ ಪತ್ನಿಗೆ ಹೆರಿಗೆಯಾದ ದಿನಾಂಕದಿಂದ 15 ದಿವಸಗಳ ಪಿತೃತ್ವ ರಜೆಯನ್ನು ಮಂಜೂರು ಮಾಡಬಹುದಾಗಿದೆ.
16. ಗರ್ಭಸ್ರಾವ ಅಥವಾ ಗರ್ಭಪಾತದಿಂದ ಗರ್ಭಧಾರಣೆಯು ಪರ್ಯಾವಸಾನಗೊಂಡ ಸಂದರ್ಭದಲ್ಲಿ ಮಾತೃತ್ವ ರಜೆಯು 6 ವಾರಗಳನ್ನು ಮೀರಬಾರದು. ಇಂತಹ ರಜೆಗಾಗಿ ಸಲ್ಲಿಸಿದ ಅರ್ಜಿಯು ನೋಂದಾಯಿತ ವೃತ್ತಿನಿರತ ವೈದ್ಯರಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರದಿಂದ ಸಮರ್ಥಿತವಾಗಿರಬೇಕು.
17. ಮಾತೃತ್ವ ರಜೆಯ ಮೇಲೆ ತೆರಳುವ ಸಿಬ್ಬಂದಿಗಳಿಗೆ ರಜೆಯ ನಿಕಟಪೂರ್ವದಲ್ಲಿ ಪಡೆಯುತ್ತಿದ್ದ ವೇತನಕ್ಕೆ ಸಮನಾದ ವೇತನವನ್ನು ರಜೆಯ ಅವಧಿಯಲ್ಲಿ ಪಡೆಯಲು ಅರ್ಹರಿರುತ್ತಾರೆ.
18. ಎರಡು ಅಥವಾ ಹೆಚ್ಚು ಮಕ್ಕಳನ್ನು ಹೊಂದಿರುವ ಮಹಿಳಾ ಸಿಬ್ಬಂದಿಗಳಿಗೆ ಈ ಮಾತೃತ್ವ ರಜೆಯನ್ನು ಮಂಜೂರು ಮಾಡತಕ್ಕದಲ್ಲ.
19. ಮಾತೃತ್ವ ರಜೆಗಾಗಿ ಸಲ್ಲಿಸುವ ಅರ್ಜಿಯೊಂದಿಗೆ ಸಂಬಂಧಿತ ಮಹಿಳಾ ಸಿಬ್ಬಂದಿಗಳು ಈ ಕುರಿತು ಸ್ವಯಂ-ಘೋಷಣೆಯನ್ನು ಮಾತೃತ್ವ ರಜೆಯನ್ನು ಮಂಜೂರು ಮಾಡುವ ಅಧಿಕಾರಿಗೆ ಸಲ್ಲಿಸತಕ್ಕದ್ದು.
20. ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಮಹಿಳಾ ಸಿಬ್ಬಂದಿಗಳಿಗೆ ಗರಿಷ್ಠ 180 ದಿನಗಳವರೆಗೆ ಮಾತೃತ್ವ ರಜೆಯನ್ನು ಈ ಕೆಳಕಂಡಂತೆ ನಿಯತಗೊಳಿಸತಕ್ಕದ್ದು.

- ಶ್ರೀಮತಿ X ಇವರ ಒಪ್ಪಂದದ ಅವಧಿ ದಿನಾಂಕ:15.07.2021 ರಿಂದ ಪ್ರಾರಂಭವಾಗಿ ದಿನಾಂಕ: 14.07.2022ಕ್ಕೆ ಮುಕ್ತಾಯವಾಗುತ್ತದೆ. ಅವರು ದಿನಾಂಕ: 01.05.2022 ರಂದು ಮಾತೃತ್ವ ರಜೆಯ ಮೇಲೆ ತೆರಳಿದ್ದಲ್ಲಿ ಹಾಗೂ ಅವರ ಗುತ್ತಿಗೆ ಅವಧಿಯು ವಿಸ್ತರಿಸಲ್ಪಡದಿದ್ದಲ್ಲಿ ಅವರ

www.needsofpublic.in

ಮಾತೃತ್ವ ರಜೆಯ ಅವಧಿಯನ್ನು ಒಪ್ಪಂದದ ಗರಿಷ್ಠ ಅವಧಿಯವರೆಗೆ ಅಂದರೆ ದಿನಾಂಕ:14.07.2022 ರವರೆಗೆ ಸೀಮಿತಗೊಳಿಸತಕ್ಕದ್ದು.

- ಒಂದು ವೇಳೆ ಅವರ ಗುತ್ತಿಗೆ ಅವಧಿಯು ವಿಸ್ತರಿಸಲ್ಪಟ್ಟಲ್ಲಿ ಆಗ ಅವರು ಗರಿಷ್ಠ 180 ದಿನಗಳ ಮಾತೃತ್ವ ರಜೆಯನ್ನು ಪಡೆಯಲು ಅರ್ಹರಿರುತ್ತಾರೆ.

14. ಆಯ್ಕೆ ಹೊಂದಿದ ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹಾಗೂ ಫಾರ್ಮಸಿ ಅಧಿಕಾರಿಗಳ ಹುದ್ದೆಗಳನ್ನು ಸ್ಥಳಕ್ಕೆ ಇಲಾಖೆಯ ವತಿಯಿಂದ ಖಾಯಂ ನೌಕರರು ಬಂದಲ್ಲಿ ಕರ್ತವ್ಯದಿಂದ ಬಿಡುಗಡೆ ಹೊಂದಲು ತಕರಾರು ಮಾಡುವಂತಿಲ್ಲ ಹಾಗೂ ಈ ಬಗ್ಗೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅಥವಾ ಇನ್ನಾವುದೇ ನ್ಯಾಯಾಲಯದಲ್ಲಿ ದಾವೆ ಹೂಡುವಂತಿಲ್ಲ.
15. ಆಯ್ಕೆ ಹೊಂದಿದ ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹಾಗೂ ಫಾರ್ಮಸಿ ಅಧಿಕಾರಿಗಳ ಹುದ್ದೆಗಳನ್ನು ಕರ್ತವ್ಯಕ್ಕೆ ಹಾಜರಾಗುವ ಮೊದಲು ಮೇಲಿನ ನಿಬಂಧನೆಗಳನ್ನು ಒಪ್ಪಿಕೊಂಡಿರುವಂತೆ ರೂ. 100.00 (ನೂರು ರೂಪಾಯಿಗಳ) ಛಾಪಾ ಕಾಗದದ ಮೇಲೆ ಮುಚ್ಚಳಿಕೆಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಬರೆದು ಕೊಡತಕ್ಕದ್ದು.
16. ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹಾಗೂ ಫಾರ್ಮಸಿ ಅಧಿಕಾರಿಗಳ ಪ್ರಾಥಮಿಕ ಆರೋಗ್ಯ ಕೇಂದ್ರದ ಕೇಂದ್ರ ಸ್ಥಾನದಲ್ಲಿ ವಾಸಿಸತಕ್ಕದ್ದು.

**ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಹಾಗೂ ಫಾರ್ಮಸಿ ಅಧಿಕಾರಿಗಳನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅನುಮೋದಿಸಲಾದ ಹುದ್ದೆಗಳ ವಿವರ.**

| ಕ್ರ.ಸಂ. | ಜಿಲ್ಲೆ ಹೆಸರು | ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅನುಮೋದಿಸಿರುವ ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿಗಳ ಸಂಖ್ಯೆ | ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅನುಮೋದಿಸಿರುವ ಫಾರ್ಮಸಿ ಅಧಿಕಾರಿಗಳ ಸಂಖ್ಯೆ |
|---|---|---|---|
| 1 | ಬೆಂಗಳೂರು ನಗರ ಜಿಲ್ಲೆ | 3 | 5 |
| 2 | ಬೆಂಗಳೂರು ಗ್ರಾ. ಜಿಲ್ಲೆ | 2 | 1 |
| 3 | ಚಿತ್ರದುರ್ಗ | 1 | 24 |
| 4 | ದಾವಣಗೆರೆ | 1 | 15 |
| 5 | ಕೋಲಾರ | 11 | 9 |
| 6 | ಶಿವಮೊಗ್ಗ | 18 | 24 |
| 7 | ತುಮಕೂರು | 25 | 18 |
| 8 | ಬೆಂಗಳೂರು ದಕ್ಷಿಣ ತಾಲ್ಲೂಕು | 3 | 3 |
| 9 | ಚಿಕ್ಕಬಳ್ಳಾಪುರ | 23 | 7 |
| 10 | ಮೈಸೂರು | 23 | 30 |
| 11 | ಮಂಡ್ಯ | 25 | 15 |
| 12 | ದಕ್ಷಿಣ ಕನ್ನಡ | 22 | 11 |
| 13 | ಚಿಕ್ಕಮಗಳೂರು | 14 | 29 |
| 14 | ಚಾಮರಾಜನಗರ | 28 | 22 |
| 15 | ಕೊಡಗು | 13 | 11 |
| 16 | ಹಾಸನ | 20 | 51 |
| 17 | ಉಡುಪಿ | 5 | 13 |
| 18 | ಬೆಳಗಾವಿ | 17 | 4 |
| 19 | ಬಾಗಲಕೋಟೆ | 3 | 3 |
| 20 | ವಿಜಯಪುರ | 7 | 3 |
| 21 | ಧಾರವಾಡ | 1 | 1 |

www.needsofpublic.in

| | | | |
|---|---|---|---|
| 22 | ಗದಗ | 6 | 3 |
| 23 | ಹಾವೇರಿ | 18 | 7 |
| 24 | ಉತ್ತರ ಕನ್ನಡ | 27 | 23 |
| 25 | ಕಲಬುರಗಿ | 13 | 26 |
| 26 | ಕೊಪ್ಪಳ | 11 | 4 |
| 27 | ಬೀದರ್ | 4 | 9 |
| 28 | ರಾಯಚೂರು | 19 | 8 |
| 29 | ಬಳ್ಳಾರಿ | 8 | 5 |
| 30 | ವಿಜಯನಗರ | 14 | 5 |
| 31 | ಯಾದಗಿರಿ | 15 | 11 |
| | **ಒಟ್ಟು** | 400 | 400 |

ಆಯುಕ್ತರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಬೆಂಗಳೂರು.

ಪ್ರತಿಯನ್ನು:

1. ಮಾನ್ಯ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರಿಗೆ ಕಳುಹಿಸುತ್ತಾ ತುರ್ತಾಗಿ ಅಗತ್ಯ ಕ್ರಮವಹಿಸಲು ಸೂಚಿಸಿದೆ.
4. ಗಣಕಯಂತ್ರ ವಿಭಾಗ, ಇವರಿಗೆ ರವಾನಿಸುತ್ತಾ ಇಲಾಖೆಯ ಅಧಿಕೃತ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಿದೆ.